| Deposition Sheets (RP.No.57) Form No.4 (Civil) | **IN THE COURT OF <u>CIVIL JUDGE & J.M.F.C., KARKALA.</u>** |
|---|---|
| | **Criminal Case No. 457/2024** |
| | **..................................................Vs....................................** |

ಸಾಕ್ಷಿದಾರನ ಹೆಸರು ಃ ಡಾ. ವಾಸುದೇವ್ ಪಿ.ಡಬ್ಲ್ಯೂಃ 5

ತಂದೆಯ ಹೆಸರುಃ ಸುರೇಂದ್ರ ಪೈ ಸಿ.ಡಬ್ಲ್ಯೂಃ 5

ಪ್ರಾಯ ಃ 47 ವರ್ಷ

ಉದ್ಯೋಗ ಃ ಮುಖ್ಯ ಪಶುವೈದ್ಯಾಧಿಕಾರಿ,

ವಾಸ ಃ ಕಾರ್ಕಳ

ದಿನಾಂಕ 25.10.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

<u>ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರುಃ-</u>

ನಾನು ಮೇ 2022 ರಿಂದ ಇಲ್ಲಿಯವರೆಗೆ ನಾನು ಪಶುವೈದ್ಯಾಧಿಕಾರಿಯಾಗಿ ಕಾರ್ಕಳದ ಪಶುವೈದ್ಯ ಆಸ್ಪತ್ರೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2. ದಿಃ28.10.2023 ರಂದು ಅಪಘಾತ ಆಗಿದೆ ಎಂದು ದನವನ್ನು ನಮ್ಮ ಆಸ್ಪತ್ರೆಗೆ ಕರೆದುಕೊಂಡು ಬಂದಿರುತ್ತಾರೆ. ಸದ್ರಿ ದನವನ್ನು ನಾನು ಪರೀಕ್ಷಿಸಿದ ನಂತರ ಅದರ ಹಿಂದಿನ ಕಾಲು tibial compound fracture ಆಗಿತ್ತು. ದನಕ್ಕೆ ಚಿಕಿತ್ಸೆ ನೀಡಿ ಕಳುಹಿಸಿಕೊಟ್ಟಿರುತ್ತೇನೆ. 3 ದಿನದ ನಂತರ ಚಾಸಾ-1 ರವರ ಮನೆಯಲ್ಲಿ ಸ್ಥಳೀಯ ಪಶುವೈದ್ಯರಿಂದ ಚಿಕಿತ್ಸೆಯನ್ನು ನೀಡಿರುತ್ತೇವೆ. ಸದ್ರಿ ಚಿಕಿತ್ಸೆ ನೀಡಿದ್ದರೂ ಸಹ ದನ ಎದ್ದೇಳುತ್ತಿರಲಿಲ್ಲ. ದಿಃ31.10.2023 ರಂದು ಬೆಳಿಗ್ಗೆ 8.00 ಗಂಟೆಗೆ ನನಗೆ ಫೋನ್ ಮಾಡಿ ಚಾಸಾ-1 ರವರು ಸದ್ರಿ ದನ ಬೆಳಿಗ್ಗಿನ ಜಾವ 3.00 ಗಂಟೆಗೆ ಮೃತಪಟ್ಟಿರುವುದಾಗಿ ತಿಳಿಸಿರುತ್ತಾರೆ. ನಾನು ಸುಮಾರು ಬೆಳಿಗ್ಗೆ 8.15 ಗಂಟೆಗೆ ಚಾಸಾ-1 ರವರ ಮನೆಗೆ ಹೋಗಿ ಅಲ್ಲಿ ಸದ್ರಿ ದನದ ಪೋಸ್ಟ್‌ಮಾರ್ಟಂ ಮಾಡಿರುತ್ತೇನೆ .

3. ಸದ್ರಿ ದನ ಮೂಳೆ ಮುರಿತದಿಂದ ಎಳೆಲು ಆಗದೆ septicaemia ಕಾರಣದಿಂದ ಮೃತಪಟ್ಟಿರುತ್ತದೆ. ಅದರ ಬಗ್ಗೆ ನಾನು ಪೋಸ್ಟ್ ಮಾರ್ಟಂ ವರದಿಯನ್ನು ಕಾರ್ಕಳ

ಗ್ರಾಮಾಂತರ ಪೊಲೀಸ್ ಠಾಣೆಯ ಸಿಬ್ಬಂದಿಗೆ ನೀಡಿರುತ್ತೇನೆ. ಸದ್ರಿ ಪೋಸ್ಟ್ ಮಾರ್ಟಂ ವರದಿಯನ್ನು ಈಗ ನೋಡಿದ್ದು ಅದರಲ್ಲಿ ನನ್ನ ಸಹಿ ಇದೆ. ಸದ್ರಿ ದಾಖಲೆಯನ್ನು ನಿಪಿ-9 ಎಂದು, ಸಾಕ್ಷಿಯ ಸಹಿಯನ್ನು ನಿಪಿ-9(ಎ) ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ ಆರೋಪಿ ಪರಃ ಶ್ರೀ ಆರ್ ಎಸ್ ವಕೀಲರಿಂದಃ</u>

4. ನಾನು ದಿಃ28.10.2023 ರಂದು ಸದ್ರಿ ದನವನ್ನು ನನ್ನ ಆಸ್ಪತ್ರೆಯಲ್ಲಿ ಪರೀಕ್ಷಿಸಿದ್ದೇನೆ. ಆ ದಿನ ಪರೀಕ್ಷಿಸಿದ ಕುರಿತು ಒಪಿಡಿಯಲ್ಲಿ ನಮೂದು ಇದೆ ಬೇರೆ ಯಾವುದೇ ಗಾಯದ ಪ್ರಮಾಣ ಪತ್ರ ಇರುವುದಿಲ್ಲ. ನಾನು ಸದ್ರಿ ಒಪಿಡಿ ರಿಜಿಸ್ಟರ್ ನ್ನು ಪೊಲೀಸರಿಗೆ ನೀಡಿರುವುದಿಲ್ಲ. ಆ ದಿನ ಸದ್ರಿ ದನವನ್ನು ಸುಮಾರು 11.00 ರಿಂದ 11.30 ಗಂಟೆಯವರೆಗೆ ಪರೀಕ್ಷಿಸಿದ್ದೇನೆ. ಪರೀಕ್ಷೆ ಮಾಡಿ ಚಿಕಿತ್ಸೆ ನೀಡಿದ ನಂತರ ಸದ್ರಿ ದನವು ಚೇತರಿಸಿಕೊಂಡಿರಲಿಲ್ಲ. ನಾನು ಹೇಳಿದ ಗಾಯವು ಗುಣವಾಗುವಂತಹದ್ದು ಆಗಿರಲಿಲ್ಲ. ಚಾಸಾ-1 ರವರು ಸದ್ರಿ ದನಕ್ಕೆ ಆದ ಗಾಯದ ಹಿನ್ನಲೆ ಅಪಘಾತ ಎಂದು ತಿಳಿಸಿರುತ್ತಾರೆ. ಸಾಮಾನ್ಯವಾಗಿ ಸಾಕುವ ದನಕ್ಕೆ ವಿಮೆ ಇರುತ್ತದೆ ಮತ್ತು ದನ ಮೃತಪಟ್ಟರೆ ವಿಮೆ ಸಿಗುತ್ತದೆ.

5. ನಾನು ನಿಪಿ-9 ರಲ್ಲಿ tentative diagnosis ರಲ್ಲಿ ದನದ ಸಾವಿಗೆ ಕಾರಣ ಸದ್ರಿ ಗಾಯ ಇರಬಹುದು ಎಂದು ಬರೆದಿರುತ್ತೇನೆ ಆದರೆ ಗಾಯ ಮತ್ತು ಗಾಯವಾದ ನಂತರ ಆದ ಕಾರಣಗಳು ಕೂಡಾ ಆಗಿರಬಹುದು. ದಿಃ28.10.2023 ರಂದು ನಾನು ಸದ್ರಿ ದನವನ್ನು ಪರೀಕ್ಷೆ ಮಾಡಿರುವುದಿಲ್ಲ ಹಾಗಾಗಿ ನಾನು ಯಾವುದೇ ಗಾಯದ ಪ್ರಮಾಣಪತ್ರ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಪೊಲೀಸರ ಕೋರಿಕೆಯ ಮೇರೆಗೆ ನಿಪಿ-9 ನ್ನು ನೀಡಿರುತ್ತೇನೆ.

ಮರು ವಿಚಾರಣೆ ಇರುವುದಿಲ್ಲ.

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.
ಓದಿ ಹೇಳಿ ಕೇಳಿ ಸರಿ ಇದೆ.

1 ನೇ ಹೆ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ., ಕಾರ್ಕಳ